Indian Journal of History and Archaeology

ISSN (E): 2582-225X
Vol-1 Issue 1, May-June 2019, 22-28



# ಬೆಳವಾಡಿಯ ವೀರ ನಾರಾಯಣ ದೇವಾಲಯದ ಮಹದ್ವಾರದಲ್ಲಿರುವ ಬಿಡಿಶಿಲ್ಪಗಳು

**ಬಸಪ್ಪ ಕೆ.ಬಿ**

**ಬಸಪ್ಪ ಕೆ.ಬಿ**
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ,ಮೈಸೂರು

ಧಾರ್ಮಿಕ ಶದ್ಧೆಯು ಜೀವನದ ಒಂದು ಪ್ರಮುಖ ಅಂಶ ಎನಿಸಿರುವ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣುತ್ತೇವೆ. ಈ ದೇವಾಲಯದ ಮುಖ್ಯ ಗರ್ಭಗೃಹದಲ್ಲಿರುವ ವಾಸ್ತುವಿಗೆ ದೇವತೆ ಎನ್ನುತ್ತೇವೆ. ಇವುಗಳ ರೂಪವನ್ನು ತಯಾರಿಸಿರುವ ದೇವತೆಗಳ ಮೂರ್ತಿಯನ್ನು ಶಿಲ್ಪ ಎಂದು ಕರೆಯುತ್ತಾರೆ. ದೇವಾಲಯಗಳು ನಿರ್ಮಾಣವಾದಂತೆ ಶಿಲ್ಪಗಳು ರೂಪಗೊಂಡು ವಾಸ್ತುವಿನ ಸಿರಿವಂತಿಕೆಯನ್ನು ಹೆಚ್ಚಿಸಿದವು. ದೇವಾಲಯದ ವಾಸ್ತುಶಿಲ್ಪವು ಅಧಿಕ ವರ್ಷಗಳ ಕಾಲ ನಶಿಸದೆ ಉಳಿಯಬೇಕು. ಶ್ರೀಮಂತಿಕೆಯಿಂದ ಕೂಡಿರಬೇಕು, ಆಕರ್ಷಣೀಯವಾಗಿರಬೇಕು. ಉತ್ತಮ ಗಾಂಭೀರ್ಯತೆಯ ಜೊತೆಗೆ ಚೆಲುವು ಮೈಗೂಡಿಕೊಂಡಿರಬೇಕು. ಇತ್ಯಾದಿ ಉದಾತ್ತ ಭಾವನೆಗಳ ರೂಪದಲ್ಲಿ ಶಿಲ್ಪಗಳು ಹೆಚ್ಚಾಗಿ ದೇವಾಲಯಗಳ ವಾಸ್ತುವಿನೊಂದಿಗೆ ಶಿಲ್ಪಕ್ಕೆ ಹೆಚ್ಚು ಮೆರುಗನ್ನು ನೀಡಿ ಪೋಷಿಸಿ ಬೆಳೆಸಿದ್ದಾರೆ ಎಂಬುದು ಶ್ರೇಷ್ಠಕರವೆನಿಸಿದೆ. ಈ ಬೆಳವಣಿಗೆ ಹೆಚ್ಚಾಗಿ ಕಂಡುಬಂದಿದ್ದು ಹೊಯ್ಸಳರ ಅವಧಿಯಲ್ಲಿ ಎಂದರೆ ತಪ್ಪಾಗಲಾರದು. ಜೊತೆಗೆ ಇವರ ಕಾಲದ ಶಿಲ್ಪಗಳಲ್ಲಿ ಶೈವ, ಶಾಕ್ತ, ವೈಷ್ಣವ ಮತ್ತು ಜೈನಧರ್ಮದ ದೇವಾಲಯಗಳ ಶಿಲ್ಪಗಳ ಪ್ರಭೇದಗಳನ್ನು ಗುರುತಿಸಬಹುದು.

ಬೆಳವಾಡಿ ಚಿಕ್ಕಮಗಳೂರು ಜಿಲ್ಲೆ ಮತ್ತು ತಾಲೂಕಿಗೆ ಸೇರಿರುವ ಒಂದು ಗ್ರಾಮವಾಗಿದೆ. ಇದರ ಉತ್ತರದಲ್ಲಿ ಬಾಣಾವರ ಮತ್ತು ಚಿಕ್ಕಮಗಳೂರು ರಸ್ತೆ ಮಾರ್ಗದಲ್ಲಿ ಕಂಡು ಬರುತ್ತದೆ. ಇದು ಚಿಕ್ಕಮಗಳೂರಿನಿಂದ ಪೂರ್ವಕ್ಕೆ ಸು. 29 ಕಿ.ಮೀ ದೂರದಲ್ಲಿ ಕಂಡು ಬರುತ್ತದೆ. ಇಲ್ಲಿ ವೀರ ನಾರಾಯಣ ದೇವಾಲಯವಿದು ್ದ ಐತಿಹಾಸಿಕವಾಗಿ,

ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೆಚ್ಚಿನ ಮಹತ್ವಹೊಂದಿದೆ. ಕ್ರಿ.ಶ 1760 ರಲ್ಲಿ ಮೈಸೂರಿನ ದೊರೆಯಾದ ಇಮ್ಮಡಿ ಕೃಷ್ಣರಾಜ ಒಡೆಯರ್ ಈ ಗ್ರಾಮವನ್ನು ಶೃಂಗೇರಿ ಮಠಕ್ಕೆ ಜಹಾಗಿರಿಯಾಗಿ ನೀಡಿದ್ದರು. ಹೊಯ್ಸಳರ ಕಾಲದಲ್ಲಿ ಇದೊಂದು ಜೈನ ಕೇಂದ್ರವಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಆದರೆ ಈಗ ಜೈನಧರ್ಮಕ್ಕೆ ಸಂಬಂಧಿಸಿದ ಯಾವ ಆಧಾರಗಳು ಇಲ್ಲಿ ಕಾಣಬರುವುದಿಲ್ಲ. ಈ ಗ್ರಾಮದ ಬಳಿ ಮೈಲುತುತ್ತದ ಗಣಿಗಳಿವೆ. ಇಲ್ಲಿ ಹಸಿರು ಶಿಲೆ(ಪಚ್ಚೆಕಲ್ಲು) ಯೂ ಸಹ ದೊರೆಯುತ್ತದೆ. ಇಲ್ಲಿರುವ ವೀರನಾರಾಯಣ ದೇವಾಲಯವನ್ನು ಹೊಯ್ಸಳರ ಕಾಲದಲ್ಲಿ ನಿರ್ಮಿಸಲಾಗಿದೆ. ಇದೊಂದು ತ್ರಿಕೂಟಾಚಲದೇವಾಲಯವಾಗಿದ್ದು ಹೊಯ್ಸಳರ ಕಾಲದ ದೇವಾಲಯಗಳಲ್ಲಯೇ ಅತ್ಯಂತ ದೊಡ್ಡ ದೇವಾಲಯವಾಗಿದೆ.

ವೀರನಾರಾಯಣ ದೇವಾಲಯದ ಪೂರ್ವಭಾಗದಲ್ಲಿರುವ ಸಭಾಮಂಟಪದ ಪೂರ್ವದಲ್ಲಿ ಉಪ್ಪರಿಗೆ ಅಥವಾ ಮಹಾದ್ವಾರವಿದೆ. ಮೊದಲು ಇಲ್ಲಿ ಪ್ರವೇಶದ್ವಾರವಿದ್ದಂತೆ ಕಂಡುಬರುತ್ತದೆ. ಇದರ ಒಳಭಾಗದಲ್ಲಿ ಸು.12ಕ್ಕೂ ಹೆಚ್ಚು ಬಿಡಿಶಿಲ್ಪಗಳಿವೆ, ಇವುಗಳನ್ನು ಬೇರೆ ಸ್ಥಳದಿಂದ ಸ್ಥಳಾಂತರಿಸಿ ತಂದಿರಿಸಿದಂತೆ ಕಂಡುಬರುತ್ತದೆ. ಹೀಗಾಗಿ ಇವುಗಳ ಅಧ್ಯಯದ ದೃಷ್ಠಿಯಿಂದ ರಚಿತವಾದ ಕಿರು ಲೇಖನ ಇದಾಗಿದ್ದು ಅವುಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ..

**ವೇಣುಗೋಪಾಲ:–** ಈ ದೇವನು ಸು.ಒಂದು ಅಡಿ ಎತ್ತರವಿರುವ ಗರುಡ ಪೀಠದ ಮೇಲೆ 4 ಅಡಿ ಎತ್ತರವಿರುವ ಒಂಟಿಕಾಲಿನಲ್ಲಿ ನಿಂತು ಕೊಳಲನ್ನು ಊದುತ್ತಿರುವಂತೆ ರಚಿಸಲಾಗಿದೆ. ಆದರೆ ಬಲಗಾಲು ಮುರಿದು ಹೋಗಿದೆ. ಕೊಳಲನ್ನು ಹಿಡಿದು ಕೊಂಡಿದ್ದ ಕೈಗಳೆರಡು ಮುರಿದು ಹೋಗಿವೆ. ಈ ದೇವನ ಮೈಮೇಲೆ ಸುಂದರವಾಗಿ ಬಿಡಿಸಲಾಗಿರುವ ವಸ್ತ್ರಾಭರಣಗಳಿವೆ. ಈ ದೇವನ ಇಕ್ಕೆಲೆಗಳಲ್ಲಿ ಫಲ ಮತ್ತು ಪದ್ಮ ಹಿಡಿದು ನಿಂತಿರುವ ದೇವಿಯರಿದ್ದಾರೆ. ಈ ದೇವಿಯರ ಕೈಗಳು ತುಟಿತವಾಗಿವೆ. ಇವರ ಮೇಲೆ ಗೋವುಗಳನ್ನು ಬಹಳ ಸುಂದರವಾಗಿ ಬಿಡಿಸಲಾಗಿದೆ. ಮೇಲೆ ದೇವ ದೇವತೆಗಳು ಕೈಮುಗಿದು ಕುಳಿತಿದ್ದಾರೆ. ಮೇಲೆ ಬಿಡಿಸಲಾಗಿರುವ ಕಮಾನಿನಾಕಾರದ ಛತ್ರಿಯು ಮುರಿದು ಹೋಗಿದೆ ಪ್ರಭಾವಳಿಯಲ್ಲಿ ಬಳ್ಳಿಸುರುಳಿಗಳ ಅಲಂಕರಣವಿದೆ. ಶಿರದ ಎಡ ಮತ್ತು ಬಲ ಭಾಗದಲ್ಲಿ ಶಂಖ, ಚಕ್ರ, ಗಧಾ, ಪದ್ಮಗಳನ್ನು ಬಿಡಿಸಲಾಗಿದೆ.

**ವೀರಭದ್ರ:–** ಈ ದೇವನು ಶಿವನ ಮತ್ತೊಂದು ಅವತಾರ, ಕೂರ್ಮ ಪುರಾಣಗಳಲ್ಲಿ ವೀರಭದ್ರನ ಉಲ್ಲೇಖವಿದೆ. ಚತುರ್ಭುಜವನ್ನು ಹೊಂದಿರುವ ಈ ದೇವನು ಕೈಯಲ್ಲಿ ಬಿಲ್ಲು, ಬಾಣ, ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುತ್ತಾನೆ. ವಸ್ತ್ರಧಾರಿಯಾಗಿದ್ದು, ಕೆಲವು ಶಿಲ್ಪಗಳಲ್ಲಿ ಶಿಲ್ಪಿಸಿರುವುದುಂಟು ಕೊರಳಿಗೆ ರುದ್ರಾಕ್ಷಿಮಾಲೆಯನ್ನು ಹಾಕಿಕೊಂಡಿರುವಂತೆ ಸುಂದರವಾಗಿ ರಚಿಸಲಾಗಿದೆ.

**ಗಣಪತಿ:–** ಪ್ರಾಚೀನ ಮತಧರ್ಮ ಪಂಥಗಳಲ್ಲಿ ಶೈವ ಪಂಥವು ಪ್ರತೀಕವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ನಾಗಪಂಥ, ಕೌಮಾರ ಪಂಥಗಳೂ, ಸಮಕಾಲೀನವಲ್ಲದಿದ್ದರೂ ಇವೆರಡೂ ಅನೇಕ ಶತಮಾನಗಳಿಂದಲೂ ಆಚರಣೆಯಲ್ಲಿವೆ. ಪಂಚಾಯತನ ಪೂಜೆ ಕ್ರಿ.ಶ 8ನೇ ಶತಮಾನದಲ್ಲಿ ಹೆಚ್ಚು ಪ್ರಚಾರಕ್ಕೆ ಕಂಡು ಬಂದರೂ ಗರ್ಭಗುಡಿಯ ಎಡಬದಿಗೆ ಮಹಿಷಮರ್ದಿನಿಯನ್ನೂ ಬಲಬದಿಗೆ ಗಣೇಶನನ್ನು ಇಟ್ಟು ಪೂಜಿಸುವ ಪದ್ಧತಿ ಪ್ರಾರಂಭವಾಯಿತು. ತದನಂತರದಲ್ಲಿ ಗಣಪತಿ ವಿವಿದ ರೀತಿಯ ಆಕಾರ ಅವತಾರಗಳೂ ರೂಢಿಗೆ ಬಂದದ್ದು

ಅನಂತರದ ಕಾಲದಲ್ಲಿ ಗಣೇಶನ ಗುಡಿಗಳು ಕರ್ನಾಟಕದಾದ್ಯಂತ ಕಂಡುಬಂದಿವೆ. ಸುಮಾರು ಮೂರು ಅಡಿಗಳ ಎತ್ತರವಾಗಿರುವ ಈ ಗಣಪತಿಯು ಚರ್ತುಭುಜವನ್ನು ಹೊಂದಿದ್ದು ವಿಗ್ರಹವು ನಾಲ್ಕು ಪುಟ್ಟ ಕೈ, ಪುಟ್ಟ ಕಾಲುಗಳನ್ನು ಹೊಂದಿರುತ್ತದೆ. ಕೈಗಳಲ್ಲಿ ಫಲ, ಮುರಿದ ದಂತ, ಪಾಸ, ಅಂಕುಶವಿಡಿದು ಕೊಂಡಿದ್ದಾನೆ. ಹೊಟ್ಟೆಯ ಭಾಗ ತುಟಿತವಾಗಿದೆ. ವಕ್ರತುಂಡ ಮಹಾಕಾಯ ಎಂಬ ಹೆಸರಿಗೆ ತಕ್ಕಂತೆ ದೊಡ್ಡ ಗುಡಾಣದಂತಹ ಹೊಟ್ಟೆಯನ್ನು ಹೊಂದಿದ್ದಾನೆ. ಸೊಂಡಿಲುಳ್ಳ ಆನೆಯ ಮುಖವು ಮೊರದಗಲವಾದ ಕಿವಿಗಳೂ, ಯಜ್ಞೋಪವೀತ ಉದರ ಬಂಧವನ್ನು ಹೊಂದಿರುತ್ತದೆ. ಗಣೇಶನಿಗೆ ಪರ್ಯಾಯ ಪದವಾದ ವಿನಾಯಕ ಎಂಬ ಹೆಸರು ಅಥರ್ವಶಿರಸ್ ಉಪನಿಷತ್ತಿನಲ್ಲಿ ಕಂಡುಬರುತ್ತದೆ.

**ಭೈರವ:–** ಭೈರವನು ಶಿವನ ಒಂದು ಅವತಾರ. ಭೈರವನ ಶಿಲ್ಪದ ಬಗ್ಗೆ ವಿಷ್ಣು ಧರ್ಮೋತ್ತರದಲ್ಲಿ ಉಲ್ಲೇಖವಿದೆ. ಒಟ್ಟು 64 ಭೈರವನ ಅವತಾರಗಳಿವೆ. ಇವುಗಳಲ್ಲಿ ವಟುಕ ಭೈರವ ಮತ್ತು ಸೌರ್ಣಾಕರ್ಷಣ ಭೈರವ ಮುಖ್ಯವಾದವುಗಳಾಗಿವೆ. ಭೈರವ ನಗ್ನ ರೂಪದಲ್ಲಿದ್ದು, ಪೀಠದಲ್ಲಿ ಚೇಳಿನ ಶಿಲ್ಪವಿರುತ್ತದೆ. ಚತುರ್ಭುಜವನ್ನು ಹೊಂದಿರುವ ಭೈರವನು 3 ಕೈಗಳಲ್ಲಿ ತ್ರಿಶೂಲ, ಢಮರುಗ ಮತ್ತು ಖಡ್ಗವನ್ನು ಹೊಂದಿದ್ದು, ಮತ್ತೆರಡು ಕೈಯಲ್ಲಿ ರುಂಡವಿದ್ದು, ಅದನ್ನು ನಾಯಿಯು ನೆಕ್ಕುತ್ತಿರುವ ಶಿಲ್ಪವನ್ನು ಕೆತ್ತಲಾಗಿದೆ. ಕೆಲವು ಶಿಲ್ಪಗಳಲ್ಲಿ ರುಂಡಮಾಲೆಯನ್ನು ಧರಿಸಿ ಕಿವಿಗಳಿಗೆ ಸರ್ಪದ ಕುಂಡಲಗಳನ್ನು ಧರಿಸಿರುವನು ಮತ್ತು ಕಾಲಲ್ಲಿ ಪಾದುಕೆಗಳನ್ನು ಧರಿಸಿರುವುದು, ಸೊಂಟದಲ್ಲಿ ಗಂಟೆಯಿರುತ್ತದೆ. ಪ್ರಭಾವಳಿಯಲ್ಲಿ ಬಳ್ಳಿಸುರುಳಿ ಕೀರ್ತಿಮುಖವಿದೆ.

**ವಿಷ್ಣು:–** ಸಾಮಾನ್ಯವಾಗಿ ವಿಷ್ಣುವು ಸಮಭಂಗಿಯಲ್ಲಿದ್ದು ಚತುರ್ಭುಜನಾಗಿರುತ್ತಾನೆ. ಈ ದೇವನು ತನ್ನ ಕೈಗಳಲ್ಲಿ ಶಂಖ, ಚಕ್ರ, ಪದ್ಮ ಗದೆಯನ್ನು ಹಿಡಿದಿರುತ್ತಾನೆ ಮತ್ತು ಕೆಲವು ಶಿಲ್ಪಗಳಲ್ಲಿ ಬಲಮುಂಗೈಯಲ್ಲಿ ಫಲ, ಹಿಂಗೈಯಲ್ಲಿ ಪ್ರಯಾಗಚಕ್ರ, ಎಡ ಹಿಂಗೈಯಲ್ಲಿ ಶಂಖ, ಮುಂಗೈ ಕರಿಹಸ್ತ, ಕಿರೀಟ ಕೊಳಗದಂತಿರುತ್ತದೆ, ಕರ್ಣಕುಂಡಲ, ಕೊರಳಲ್ಲಿ ಅಗಲವಾಗಿ ದಪ್ಪನಾಗಿರುವ ಅಡ್ಡಿಕೆ, ಎಡಭುಜದಿಂದ ಹಾದು ಬಲತೋಳ ಮೇಲೆ ಇಳಿದಿರುವ ಯಜ್ಞೋಪವೀತ, ಮೊಣಕಾಲವರೆಗೆ ಇಳಿ ಬಿದ್ದಿರುವ ಆರೋಪ್ಯ ಮಾಲೆ, ನಡುವನ್ನು ಬಿಗಿದು ಮುಂಭಾಗದಲ್ಲಿ ಗಂಟು ಬಿದ್ದಿರುವ ನಡುಬಂಧ, ನಡುವಿನ ಎರಡೂ ಕಡೆಗಳಲ್ಲಿ ಇಳಿಬಿಟ್ಟಿರುವ ಬಟ್ಟೆಯನ್ನು ಸೇರಿಸುವಂತೆ ಮಧ್ಯೆ ಅರ್ಧಚಂದ್ರಾಕಾರದ ಇಳಿಬಟ್ಟೆ, ಕೈಗಳಲ್ಲಿ ದಪ್ಪ ಕಡಗಗಳನ್ನು ಕಾಣುತ್ತೇವೆ. ಚಕ್ರವು ವಿಷ್ಣುವಿನ ಆಯುಧವಾದಾಗ ಇದಕ್ಕೆ 'ಸುದರ್ಶನ' ಎಂಬ ಹೆಸರಿನಿಂದ ಕರೆಯುತ್ತಾರೆ. ವಿಷ್ಣುವಿನ ಅವತಾರಗಳೂ ಋಷಿಗಳು, ಮುನಿಗಳು, ದೇವರುಗಳು, ಮನುವಿನ ಪುತ್ರರು, ಪ್ರಜಾಪತಿಗಳು ಎಲ್ಲರೂ ಅವನ ಅಂಶ ಹತ್ತು ಬಾರಿ ರಾಕ್ಷಸ ಸಂಹಾರಕ್ಕಾಗಿ ವಿಷ್ಣು ಅವತಾರ ಮಾಡಿ ಲೋಕ ರಕ್ಷಣೆ ಮಾಡಿದ್ದಾನೆ. ಇವನ ವಾಹನ ಗರುಡವಾಗಿದೆ. ಈ ದೇವನ ಕೆಳಗಿರುವ ಪೀಠವು ಸಿಂಹಪೀಠವಾಗಿದೆ. ಬಹುಶ: ಬೇರೆ ಸ್ಥಳದಿಂದ ಇಲ್ಲಿಗೆ ಸ್ಥಳಾಂತರ ಮಾಡಿ ತಂದು ಕಾಲಿ ಇದ್ದ ಸಿಂಹ ಪೀಠದ ಮೇಲೆ ಇರಿಸಿದಂತೆ ಕಮಡುಬರುತ್ತದೆ.

**ವೇಣುಗೋಪಾಲ:–** ಈ ದೇವನು ಸು.ನಾಲ್ಕು ಅಡಿ ಎತ್ತರವಿರುವ ಈ ವೇಣುಗೋಪಾಲನು ಒಂಟಿಕಾಲಿನಲ್ಲಿ ನಿಂತಿದ್ದಾನೆ. ತನ್ನ ಎರಡೂ ಕೈಗಳಿಂದ ಕೊಳಲನ್ನು ಹಿಡಿದು ನುಡಿಸುತ್ತಿದ್ದಾನೆ. ಇಕ್ಕೆಲೆಗಳಲ್ಲಿ ಫಲ ಮತ್ತು ಪದ್ಮ ಹಿಡಿದು ನಿಂತಿರುವ ಸ್ತ್ರೀ ದೇವತೆಯರಿದ್ದಾರೆ. ಮೇಲೆ ಗೋವುಗಳು ಗೋವುಗಾಯಿಗಳು ಭಕ್ತರು ಕೈಮುಗಿದು

ಕುಳಿತಿದ್ದಾರೆ. ತಲೆಯ ಮೇಲಿರುವ ಮುಖಟವನ್ನು ಸುಂದರವಾಗಿ ಬಿಡಿಸಲಾಗಿರುವ ವಸ್ತ್ರಾಭರಣಗಳಿದೆ ಮೇಲೆ ಕಮಾನಿನಾಕಾರದ ಛತ್ರಿ ಇದೆ.

**ನಂದಿ:–** ನಂದಿಯು ಶಿವನ ವಾಹನವಾಗಿದ್ದು, ಶೈವ ದೇವಾಲಯಗಳಿರುವ ಕಡಗಳಲೆಲ್ಲಾ ನಂದಿಯ ಶಿಲ್ಪಗಳಿರುತ್ತವೆ. ಸಾಮಾನ್ಯವಾಗಿ ಲಿಂಗಕ್ಕೆ ಎದುರಾಗಿ ಶಿಖರದ ಮೊದಲ ಹಂತದ ಮೂಲೆಗಳಲ್ಲಿ ಹಾಗೂ ಸ್ತೂರ್ತಿಯ ನಾಲ್ಕು ಮೂಲೆಗಳಲ್ಲಿ ನಂದಿ ಶಿಲ್ಪಗಳನ್ನು ಕೆತ್ತಿರುತ್ತಾರೆ. ಉಮಾಕಾಂತ ಶಿವನು ನಂದಿಯ ಮೇಲೆ ಕುಳಿತ ಶಿಲ್ಪಗಳನ್ನು ಲಲಾಟ ಬಿಂಬದಲ್ಲಿ, ಭುವನೇಶ್ವರಗಳಲ್ಲಿ ಹಾಗೂ ಬಿಡಿ ಶಿಲ್ಪಗಳಲ್ಲಿ ಕಾಣಬಹುದು. ನಂದಿ ವಿನೀತ ಮೂರ್ತಿಯಾಗಿ ಲಿಂಗಕ್ಕೆ ಎದುರಾಗಿ ಕುಳಿತಿರುವಂತೆ ಸುಖನಾಸಿ ಅಥವಾ ನವರಂಗದಲ್ಲಿ ಇಟ್ಟಿರುತ್ತಾರೆ. ಇದಕ್ಕೆ ವಿಶಿಷ್ಟ ಅಲಂಕಾರವಿರುತ್ತದೆ. ಕೆಲವು ಕಡೆಗಳಲ್ಲಿ ನಂದಿಗೆ ಪೂಜೆ ಸಲ್ಲಿಸುವ ವಿಶೇಷ ಪದ್ಧತಿ ಇದೆ.  ಇಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಎರಡು ನಂದಿಗಳನ್ನು ಇಡಲಾಗಿದೆ. ಒಂದು ನಂದಿಯು ಸುಂದರವಾದ ಮತ್ತು ನಯವಾದ ಕೆತ್ತನೆಯಿಂದ ಕೂಡಿದ್ದು ಕೊರಳಲ್ಲಿ ಗಂಟೆಗಳ ಹಾರವನ್ನು ಬಹಳ ಸುಂದರವಾಗಿ ಮತ್ತು ದಪ್ಪವಾಗಿರುವಂತೆ ಬಿಡಿಸಿದ್ದಾನೆ ಮುಖದ ಭಾಗ ತುಟಿತವಾಗಿದೆ. ಇನ್ನೊಂದು ನಂದಿಯು ಸುಂದರವಾದ ಕೆತ್ತನೆಯಿಂದ ಕೂಡಿದ್ದು ಮೈಮೇಲೆ ಕೊರಳಲ್ಲಿ ಗಂಟೆಗಳ ಹಾರದ ಅಲಂಕರಣದ ಸುಂದರ ಕೆತ್ತನೆ ಮಾಡಲಾಗಿದೆ. ಆದರ ಶಿರದ ಭಾಗ ಈಗ ಇಲ್ಲವಾಗಿದೆ.

**ಸೂರ್ಯದೇವ:–**ಸೂರ್ಯ ದೇವನಿಗಾಗಿಯೇ ಕಟ್ಟಿದ ಪ್ರತ್ಯೇಕ ದೇವಾಲಯಗಳಿಲ್ಲ. ಶಿವ ಪಂಚಾಯತನದಲ್ಲಿ ಬರುವ ವಿಗ್ರಹಗಳಲ್ಲಿ ಸೂರ್ಯ ವಿಗ್ರಹವೂ ಒಂದು. ಇದು ಸಂಪೂರ್ಣ ಸಮಭಂಗಿಯಲ್ಲಿದ್ದು, ಕೈಗಳಲ್ಲಿ ತಾವರೆಯ ಮೊಗ್ಗುಗಳನ್ನು ಹಿಡಿದಿರುವಂತೆ ರಚಿಸಲಾಗುತ್ತದೆ. ಸಪ್ತಾಶ್ವಗಳನ್ನು ಹೂಡಿದ ರಥ ಅದರಲ್ಲಿ ಸಾರಥಿ ಅರುಣ ಇರುವ ಪೀಠದ ಮೇಲೆ ದ್ವಿಬಾಹುವುಳ್ಳ ಸೂರ್ಯ ದುಂಡಾದ ಮುಖ ಮತ್ತು ನೀಳವಾದ ಎರಡೂ ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದು ನಿಂತಿರುತ್ತಾನೆ. ಎರಡೂ ಕೈಗಳಿದ್ದರೆ ಕಮಲದ ಮೊಗ್ಗನ್ನು, ನಾಲ್ಕು ಕೈಗಳಿದ್ದಾಗ ಅರಳಿದ ಕಮಲವನ್ನು ತೋರಿಸಬೇಕು ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಸೂರ್ಯನ ಸುತ್ತಲೂ ಪ್ರಭಾವಳಿ ಇದ್ದು, ಪ್ರಭಾವಳಿಯ ಕೆಳ ಸ್ತರಗಳಲ್ಲಿ ಅರೆಗಂಭಗಳನ್ನು ಕೆತ್ತಿದ್ದು, ಈ ಕಂಬಗಳ ಮುಂದೆ ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವ ಉಷೆ– ಪ್ರತ್ಯುಷೆಯರಿದ್ದಾರೆ. ಶಿಲ್ಪಕ್ಕೆ ಮೆರಗು ನೀಡುವಂತೆ ಅಲಂಕಾರಿಕ ಕಿರೀಟ, ಮಕರ ಕುಂಡಲಗಳು, ಮಣಿಸರಗಳು, ಯಜ್ಞೋಪವೀತ, ಉದರಬಂಧ, ಭುಜಸರಗಳು, ಸಿಂಹಮುಖದಿಂದ ಕೂಡಿದ ಮೇಖಲ ಹಾಗೂ ಮಾಲಾಲಂಕಾರ ಮತ್ತು ನೆರಿಗೆಗಳಿಂದ ಕೂಡಿದ ಪಂಚೆ ಹಾಗೂ ಆಕರ್ಷಕವಾಗಿ ಕಲಾತ್ಮಕವಾದ ಗಂಟುಗಳನ್ನುಳ್ಳ ಕಟಿವಸ್ತ್ರ ಗುಚ್ಛಗಳು ಶಿಲ್ಪದ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತವೆ.  ಈ ದೇವನ ಎರಡೂ ಕೈಗಳು ಮುರಿದು ಹೋಗಿದೆ. ಮುಖದ ಭಾಗ ತುಟಿತವಾಗಿದೆ. ಈ ದೇವನ ಇಕ್ಕೆಲಗಳಲ್ಲಿ ಫಲವನ್ನು ಹಿಡಿದು ನಿಂತಿರುವ ಸ್ತ್ರೀ ದೇವತೆಗಳಿದ್ದಾರೆ. ಪ್ರಭಾವಳಿಯಲ್ಲಿ ಯಾವುದೆ ಸುಂದರವಾದ ಅಲಂಕರಣದ ಕೆತ್ತನೆ ಕಾಣಬರುವುದಿಲ್ಲ.

**ನಾರಾಯಣ:–** ಸಮಭಂಗಿಯಲ್ಲಿ ನಿಂತಿರುವ ಈ ದೇವನು ಎರಡು ಕೈಗಳನ್ನು ಹೊಂದಿದ್ದಾನೆ. ಆದರೆ ಈ ಎರಡೂ ಕೈಗಳು ಮೊಣಕೈವರೆಗೆ ಮುರಿದು ಹೋಗಿವೆ. ಮುಖದ ಭಾಗ ಅಸ್ಪಷ್ಟವಾಗಿದೆ. ಮೈಮೇಲೆ ಬಿಡಿಸಲಾಗಿರುವ ವಸ್ತ್ರಾಭರಣಗಳು ಸುಂದರವಾಗಿದೆ. ಪ್ರಭಾವಳಿಯಲ್ಲಿ ಬಿಡಿಸಲಾಗಿರುವ ಬಳ್ಳಿಸುರುಳಿ ಕೀರ್ತಿ ಮುಖಗಳಿವೆ. ಈ ದೇವನ ಇಕ್ಕೆಲಗಳಲ್ಲಿ ದೇವಿಯರಿಬ್ಬರು ನಿಂತಿದ್ದಾರೆ.

**ಸಪ್ತಮಾತ್ರಕೆಯರು:–** ಪುರಾಣಗಳಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಇವರ ಉಲ್ಲೇಖ ಹಾಗೂ ವರ್ಣನೆ ಇದೆ. ಇವರ ಮೂಲತಃ ಶೈವ ಪಂಥದ ದೇವತೆಗಳು ಬ್ರಾಹ್ಮೀ, ಮಹೇಶ್ವರಿ, ಕೌಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ ಇವರೆ ಸಪ್ತಮಾತೃಕೆಯರು, ಸಾಮಾನ್ಯವಾಗಿ ಸ್ತ್ರೀದೇವತೆಗಳನ್ನು ಶಕ್ತಿದೇವತೆಗಳೆಂದು ಕರೆಯುತ್ತಾರೆ. ಇವರು ಒಂದೊಂದು ದೈವದ ಶಕ್ತಿಯೆಂದು ಹೇಳುತ್ತಾರೆ. ಇವರನ್ನು ಕ್ರಮವಾಗಿ ಬ್ರಹ್ಮ, ಮಹೇಶ್ವರ, ಕುಮಾರ, ವಿಷ್ಣು, ವರಾಹ, ಇಂದ್ರ, ಯಮ ದೇವರುಗಳ ಶಕ್ತಿದೇವತೆಗಳೆಂದು ಹೇಳುವುದುಂಟು. ಸಪ್ತಮಾತೃಕೆಯರ ಶಿಲ್ಪವನ್ನು ದೇವಾಲಯಗಳ ನವರಂಗದ ಒಂದು ಭಾಗದಲ್ಲಿ ಪಟ್ಟಿಕೆಗಳಲ್ಲಿ ಕೆತ್ತಲಾಗಿದೆ. ಇವುಗಳು ಒಂದೊಂದೇ ಪೀಠದಲ್ಲಿ ಪದ್ಮಾಸನದಲ್ಲಿ ಕುಳಿತಂತೆ ಕಂಡುಬಂದರೂ ಅವರವರ ಲಾಂಛನ ಸಹಿತವಾಗಿ ಶಿಲ್ಪಿಸಲಾಗಿರುತ್ತದೆ, ಕೆಲವೊಮ್ಮೆ ಇವರ ಜೊತೆಯಲ್ಲಿ ಗಣಪತಿ, ಭೈರವನನ್ನು ಅಥವಾ ವೀಣಾಧಾರಿಯಾದ ಶಿವನನ್ನು ಶಿಲ್ಪಿಸಲಾಗಿರುತ್ತದೆ. ವಾಸ್ತುವಿದ್ಯಾ ಗ್ರಂಥದಲ್ಲಿ ಸೂರ್ಯ ಮತ್ತು ಶಕ್ತಿ ದೇವತೆಗಳಿಗೆ ಈ ದೇವಿಯರು ಶ್ರೀಯೊಡನೆ ನಾಲ್ಕು ದಿಕ್ಕುಗಳ ಬಾಗಿಲು ಕಾಯುವವರಾಗಿದ್ದಾರೆ. ಇವರಲ್ಲಿ ಬ್ರಾಹ್ಮೀ ಮತ್ತು ಮಹೇಶ್ವರಿಯರು ಪಶ್ಚಿಮ ಬಾಗಿಲಲ್ಲೂ ಕೌಮಾರಿ ಮತ್ತು ವೈಷ್ಣವಿಯರು ಉತ್ತರದ ಬಾಗಿಲಲ್ಲೂ ವರಾಹಿ ಮತ್ತು ಇಂದ್ರಾಣಿಯವರು ಪೂರ್ವದ ಬಾಗಿಲಲ್ಲೂ ಚಾಮುಂಡಿ ಮತ್ತು ಶ್ರೀಯರು ದಕ್ಷಿಣ ಬಾಗಿಲಲ್ಲೂ ಇರಬೇಕೆಂದು ತಿಳಿಸಿದೆ. ಹಾಗೆಯೇ ಇವರುಗಳು ಶಕ್ತಿದೇವತೆಗಳಾದುದರಿಂದ ನೀರಿನ ಸೆದೆಯಲ್ಲಿಟ್ಟು ಪೂಜಿಸುವ ಪದ್ಧತಿಯಿದೆ. ಸಪ್ತಮಾತ್ರಕೆಯರ ಶಿಲ್ಪಗಳಲ್ಲಿ ಮೂರು ದೇವಿಯರಿರುವ ಭಾಗ ಮಾತ್ರವಿದೆ. ಉಳಿದ ದೇವಿಯರ ಶಿಲ್ಪಗಳು ಇಲ್ಲವಾಗಿದೆ. ದುರ್ಗಿ,ಸರಸ್ವತಿ ಮತ್ತು ವೈಷ್ಣವಿಯರ ಮೂರ್ತಿಗಲಿವೆ. ಇವುಗಳ ಪಕ್ಕದಲ್ಲಿ ಗೋವರ್ಧದಾರಿ ಕೃಷ್ಣನ ಮೂರ್ತಿ ಇದೆ. ಇಕ್ಕೆಲಗಳಲ್ಲಿ ಗೋವು ಗಾಯಿ ಮತ್ತು ಗೋವುಗಳಿವೆ.

**ಸರಸ್ವತಿ:–** ಕೃಷ್ಣನ ಎಡಭಾಗದಲ್ಲಿ ಸಪ್ತಮಾತ್ರಕೆಯರಿಂದ ಮುರಿದು ಪ್ರತೀಕವಾಗಿರುವ ಬ್ರಾಹ್ಮೀ ಶಿಲ್ಪವಿದೆ. ಸರಸ್ವತಿಯು ವಿದ್ಯಾದೇವತೆ. ಬ್ರಹ್ಮನ ಶಕ್ತಿ, ಶ್ವೇತ ಪದ್ಮಾಸನ, ಶುಭ್ರವಸ್ತ್ರಾನ್ವಿತೆ, ಧವಳವರ್ಣೆ ಇವಳ ಸುತ್ತಲೂ ಋಷಿಗಳು ಇರುತ್ತಾರೆ. ಎಲ್ಲಾ ಧರ್ಮಗಳಲ್ಲೂ ಸರಸ್ವತಿಯು ಪೂಜನೀಯಳು. ಅಕ್ಷರಮಾಲೆ, ಪುಸ್ತಕ, ವೀಣೆ, ಪಾಶ, ಅಂಕುಶ, ಮುಂತಾದವು ಅವಳ ಕೈಯಲ್ಲಿರುತ್ತದೆ. ಸಾಮಾನ್ಯವಾಗಿ ಕೆಳಭಾಗದ ಎಡೆಗೈಯಲ್ಲಿ ವ್ಯಾಖ್ಯಾನ ಮುದ್ರೆಯನ್ನು ಹೊಂದಿರುತ್ತಾಳೆ. ಇವಳನ್ನು ವಿಷ್ಣುವಿನ ಶಕ್ತಿ ಎಂದು ಬಿಂಬಿಸಲಾಗುತ್ತದೆ. ಶೃಂಗೇರಿಯಲ್ಲಿ ಶಾರದೆ, ಶಾಕ್ತ ಶಾರದೆ ಅದರ ಮೂರ್ತಿ ಮೂಲಕ ಲಕ್ಷಣವನ್ನು ಕಾಣಬಹುದಾಗಿದೆ.

**ಯಕ್ಷ–ಯಕ್ಷಿಯರು:–** ಜೈನ ಪರಂಪರೆಯ ನಿಯಮದಂತೆ ಇಪ್ಪತ್ತನಾಲ್ಕು ಜನ ಜೈನ ತೀರ್ಥಂಕರರಲ್ಲಿ ಪ್ರತಿಯೊಬ್ಬ ತೀರ್ಥಂಕರರಿಗೂ ಪ್ರತ್ಯೇಕವಾಗಿ ಒಬ್ಬೊಬ್ಬ ಸೇವಕ ಮತ್ತು ಸೇವಕಿಯರಿರುತ್ತಾರೆ. ಇವರನ್ನು ಯಕ್ಷಯಕ್ಷಿಯರೆಂದು ಕರೆಯುವುದು ವಾಡಿಕೆಯಾಗಿದೆ. ತೀರ್ಥಂಕರರ ಬಲ ಮತ್ತು ಎಡಭಾಗದಲ್ಲಿ ಯಕ್ಷಯಕ್ಷಿಯರಿದ್ದು, ಇವರನ್ನು ತೀರ್ಥಂಕರರ ರಕ್ಷಕರೆಂದು ಕರೆಯುತ್ತಾರೆ.ಸು. 1 1/2 ಅಡಿ ಎತ್ತರವಿರುವ ಈ ಯಕ್ಷನು ಫಲ ಮತ್ತು ಪದ್ಮ ಹಿಡಿದು ಪದ್ಮಾಸನದಲ್ಲಿ ಕುಳಿತ್ತಿದ್ದಾನೆ. ದೇವಾಲಯದ ಹಾರದ ಮೇಲೆ ಬಿಡಿಸಲಾಗಿರುವ ಯಕ್ಷರ ಮೂರ್ತಿಗಳನ್ನು ತಂದು ಇಡಲಾಗಿದೆ. ಇವರು ಕೈಗಳಲ್ಲಿ ಫಲ ಮತ್ತು ಪದ್ಮಪುಷ್ಪವನ್ನು ಹಿಡಿದು ಪದ್ಮಾಸನದಲ್ಲಿ ಕುಳಿತಿದ್ದಾರೆ. ಮಧ್ಯದಲ್ಲಿರುವ ಶಿಲ್ಪ ಅಸ್ಪಷ್ಟವಾಗಿದೆ.

*Indian Journal of History and Archaeology*
***ISSN (E): 2582-225X,*** **Vol-1 Issue 1, May-June 2019,**

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕಲೆ ಮತ್ತು ವಾಸ್ತು ಶಿಲ್ಪ ಕ್ಷೇತ್ರದಲ್ಲಿ ಪ್ರತಿಮಾ ಶಾಸ್ತ್ರದ ನಿರೂಪಣೆಗಳಲ್ಲಿ ಶಿಲ್ಪಗಳ ಕುರಿತ ಮಾಹಿತಿ ಇದಾಗಿದ್ದು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಹೆಚ್ಚಿನ ವಿಷಯಗಳನ್ನು ನಿರೂಪಿಸುವಲ್ಲಿ ಸಹಾಯಕವಾಗಿವೆ ಎಂಬುದನ್ನು ತಿಳಿಯಪಡಿಸುತ್ತೇನೆ.

**ಛಾಯಚಿತ್ರಗಳು**



**ವೇಣುಗೋಪಾಲ**



**ವೀರಭದ್ರ**



**ಗಣಪತಿ**



**ಭೈರವ**



**ವಿಷ್ಣು**



**ವೇಣುಗೋಪಾಲ**



**ಗಣಪತಿ**



**ನಂದಿವಿಗ್ರಹ**



**ಯಕ್ಷ**

Indian Journal of History and Archaeology
*ISSN (E): 2582-225X,* Vol-1 Issue 1, May-June 2019,



ಸೂರ್ಯದೇವ



ನಾರಾಯಣ



ವಿಷ್ಣು



ಸಪ್ತಮಾತ್ರಕೆಯರು



ಯಕ್ಷ–ಯಕ್ಷಿಯರು

## ಆಕರ ಗ್ರಂಥಗಳು

1. ಹಾ.ಮಾ ನಾಯಕ– ಕನ್ನಡ ವಿಷಯ ವಿಶ್ವಕೋಶ ಸಂಪುಟ–2, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ–2007.ಪುಟ ಸಂ–1328.
2. ಅನಂತರಂಗಾಚಾರ್ಯ .ಎನ್ – ಕರ್ನಾಟಕ ವಾಸ್ತು ಶಿಲ್ಪ, ಮೈಸೂರು – 1992
3. ಚನ್ನಬಸಪ್ಪ ಎಸ್.ಪಾಟೀಲ – ಕರ್ನಾಟಕ ಶಿಲ್ಪಗಳಲ್ಲಿ ಪಂಚತಂತ್ರ್ಯ, ಮೈಸೂರು – 1994
4. ದೊರೆಬೈಲು ಮುರಳೀಧರ್ ರಾವ್ – ವಾಸ್ತುಶಿಲ್ಪ ಭಾರತೀಯ ಸಂಪ್ರದಾಯದ ಅಮೂಲ್ಯ ರತ್ನಗಳು, ಮೈಸೂರು– 1996
5. ಹಂಪಾ ನಾಗರಾಜಯ್ಯ – ಯಕ್ಷ–ಯಕ್ಷಿಯರು, ಬೆಂಗಳೂರು – 1976
6. ಪರಮಶಿವ ಮೂರ್ತಿ ಡಿ.ವಿ – ಕನ್ನಡಗಳು ಶಾಸನಶಿಲ್ಪ, ಹಂಪಿ – 1999
7. ಪ್ರಭಾಕರ. ಎಂ. ಎನ್ – ದೇವಾಲಯ ವಾಸ್ತು, ಕ.ವಿ.ವಿ. ಹಂಪಿ – 2011
8. ರಾಮಚಂದ್ರ ರಾವ್ ಎಸ್.ಕೆ – ಭಾರತದ ದೇವಾಲಯ ನೆಲೆ–ಹಿನ್ನಲೆ, ಬೆಂಗಳೂರು – 1980
9. ಶ್ರೀಕಂಠ ಶಾಸ್ತ್ರಿ ಎಸ್. – ಹೊಯ್ಸಳ ವಾಸ್ತುಶಿಲ್ಪ, ಮೈಸೂರು – 1965
10. ಗೋಪಿನಾಥ್ ರಾವ್ ಟಿ.ಎ – ಎಲಿಮೆಂಟ್ಸ್ ಆಫ್ ಹಿಂದು ಐಕಾನಾಗ್ರಫಿ ಪು–75
11. ಆಚಾರ್ಯ ಪಿ.ಕೆ– ಎ ಡಿಕ್ಷನರಿ ಆಫ್ ಹಿಂದೂ ಆರ್ಕಿಟೆಕ್ಚರ್, ಪು–362
12. ಜ್ಞಾನಾನಂದ ಜಿ– ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ(ಉತ್ತರಾರ್ಧ) ಪು–45,46